

ಬಾಚಿದ ಕೂದಲು ಒಂದುಮಟ್ಟಿಗೆ ದೈಹಿಕ ಮತ್ತು ಮಾನಸಿಕ ಪ್ರಶಾಂತತೆಯನ್ನು ಪ್ರತಿನಿಧಿಸುತ್ತದೆ.

ಯಾರದಾದರೂ ಗುರುತು ಅಥವಾ ಚಹರೆಯನ್ನು ಹೇಳಬೇಕಾದರೆ ಮೊದಲು ಅವರ ಕೂದಲಿನಿಂದ ಶುರು ಮಾಡುತ್ತೇವೆ. ತಲೆಯಲ್ಲಿ ಒಂದು ಕೂದಲೂ ಇಲ್ಲದವರನ್ನು 'ಬಾಲ್ಡಿ' ಎಂದೋ ಇಲ್ಲ 'ಬೋಳುತಲೆ' ಎಂದೋ ಹೇಳಿದರೆ ಸಾಕು, ಮತ್ತೇನೂ ಹೇಳುವುದೇ ಬೇಡ. ಅವರ ಚಿತ್ರ ಎದುರಿರುವವರಿಗೆ ಕಣ್ಮುಂದೆ ಬರುತ್ತದೆ. ಕೂದಲಿರುವವರನ್ನು ಅವರ ಕೂದಲ ವಿನ್ಯಾಸದಿಂದ ಗುಂಗುರು ಕೂದಲಿನವನು, ಹಿಂದಕ್ಕೆ ಬಾಚಿದ ಕೂದಲಿನವನು, ಮುಳ್ಳುಹಂದಿಯಂತೆ ಚೂಪಾದ ಕೂದಲಿನವನು ಎಂದು ಶುರು ಮಾಡುತ್ತಾರೆ. ಹಾಗೆಯೇ ಹಣೆಯು ಮುಚ್ಚಿಕೊಳ್ಳುವಂಥ ದಟ್ಟಕೂದಲಿನ ಅದೃಷ್ಟವಂತರು ಕೆಲವರಾದರೆ, ಬೆಳೆ ಕಟಾವು ಮಾಡಿದ ನಂತರ ಅಲ್ಲಲ್ಲಿ ಮರೆತು ಹೋದ ಪೈರಿನಂತೆ ಕೆಲವರ ತಲೆಯಲ್ಲಿ ಕೂದಲು ವಿರಳವಾಗಿ ತಲೆ ಬುರುಡೆಯಲ್ಲಿನ ಹೆದ್ದಾರಿಗಳೆಲ್ಲಾ ಸ್ಪಷ್ಟವಾಗಿ ಗೋಚರಿಸುತ್ತಿರುತ್ತವೆ.

ಕೆಲವರದು ಬಿಳಿತಲೆ ಮತ್ತೆ ಕೆಲವರದು ಕಪ್ಪುಬಣ್ಣ ಮಿಶ್ರಿತ ಬಿಳಿತಲೆ, ಮತ್ತೆ ಕೆಲವರು ನೆರೆಕೂದಲಿಗೆ ಬಂಗಾರದ ಬಣ್ಣವನ್ನು ಹಚ್ಚಿ ಸಿಂಹರೂಪಿಗಳಂತೆ ಕಾಣುತ್ತಾರೆ. ನಮ್ಮ ಸ್ನೇಹಿತರೊಬ್ಬರು ತಲೆಗೆ ಮತ್ತು ಉದ್ದನೆಯ ಗಡ್ಡಕ್ಕೆ ಕೂಡ ಬಂಗಾರದ ಬಣ್ಣವನ್ನು ಹಚ್ಚುತ್ತಾರೆ. ಅವರು ಗಂಭೀರವಾಗಿ ನಡೆದುಕೊಂಡು ಬರುತ್ತಿದ್ದರೆ ಸಿಂಹವೇ ಎದುರಿಗೆ ನಡೆದು ಬಂದಂತೆ ಕಾಣುತ್ತಿರುತ್ತದೆ. ಎಷ್ಟೋ ಪುಟ್ಟಮಕ್ಕಳು ಅವರನ್ನು ಕಂಡು ವಿಚಿತ್ರವಾಗಿ ನೋಡುವುದೂ, ಹೆದರುವುದೂ ಉಂಟು. ಹೀಗೆ ಕೂದಲ ಗುರುತಿನಿಂದಲೇ ಹಲವರ ಪರಿಚಯ ಹೇಳುವುದುಂಟು. ನನಗೂ ಬಾಲ್ಯದಲ್ಲಿ ಕೂದಲನ್ನು ಆಗಿನ ಹಲವು ಹೀರೋಗಳಂತೆ ಹಿಂದಕ್ಕೆ ಕೂರಿಸಬೇಕೆಂಬ ಆಸೆಯಿತ್ತು. ಅದಕ್ಕಾಗಿ ಹಿಂದಕ್ಕೆ ಬಾಚಲು ಪ್ರಯತ್ನಪಟ್ಟು, ನೀರು ಮತ್ತು ಹರಳೆಣ್ಣೆ ಬಳಸಿದರೂ ಸಹ ಕೂದಲು ಹಿಂದಕ್ಕೆ ಬಾಗದೆ ಮುಷ್ಕರ ಹೂಡಿ ತನ್ನ ಮಾಮೂಲಿ ಸ್ಥಿತಿಗೇ ಬರುತ್ತಿತ್ತು. ಎಲ್ಲರಿಗೂ ಹಿಂದಕ್ಕೆ ಸಲೀಸಾಗಿ ಕೂರುವ ಕೂದಲು ನನಗೇಕೆ ಹೀಗೆ ಕಾಡಿಸುತ್ತಿದೆ ಎಂದು ತಲೆ ಕೆಡಿಸಿಕೊಂಡು ನನ್ನ ಪ್ರಯತ್ನ ಮುಂದುವರಿಸಿದೆ. ಆದರೆ, ಕೊನೆಗೆ ನನ್ನ ಕೂದಲಿನ ಮುಷ್ಕರದಿಂದಾಗಿ